SRI H. C. SRIKANTAIAH (Minister of State for Power).—I beg to lay :

The Annual Financial Statement Revised Budget for 1974-75 and Budget Estimate for 1975-76 of Karnataka Electricity Board.

Under Section 61 (3) of Electricity (Supply) Act, 1948.

MADAM SPEAKER.—Both the Papers are laid.

MATTER UNDER RULE 312

Re : alleged murderer in Kodihalli village on 8-4-1975 in Hoskote Taluk

ಶ್ರೀ ಸಿ. ಬೈರೇಗೌಡ (ಬೆಮಂಗಲ್).—ಮಾನ್ಯ ಅಧ್ಯಕ್ಷರೇ, ಕಳೆದ ಜನವರಿ ೧೪ ರಂದು ಕೋಡಿಹಳ್ಳಿ ಗ್ರಾಮದಲ್ಲಿ ಎಲ್ಲ ಕಡೆಯೂ ಆಚರಣೆ ಮಾಡುವಂತ ಸಂಕ್ರಾಂತಿ ಹಬ್ಬವನ್ನು ಆಚರಣೆ ಮಾಡಿದರು. ಆಂದು ಆಲ್ಲಿ ಹೊಡೆದಾಟ ಯಾವ ಕಾರಣದಿಂದ ಆಯಿತು ಎಂಬ ಬಗ್ಗೆ ನನಗೆ ಹೆಚ್ಚಿನ ವಿವರ ಗೊತ್ತಿಲ್ಲ, ಆದು ಆದ ಕೆಲವು ದಿವಸಗಳಲ್ಲಿ ಒಬ್ಬ ಹರಿಜನ ಯುವಕ ಸಾಯುತ್ತಾನೆ. ಆ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಿದಾಗ ಆ ಬಗ್ಗೆ ಸೂಕ್ತ ಕ್ರಮ ಕೈಕೊಳ್ಳುವುದಾಗಿ ಸರ್ಕಾರದವರು ಹೇಳಿದರು. ನಂತರ ತಾ ; ೮—೪—೧೯೭೫ ರಂದು ಮಧ್ಯಾಹ್ನ ೨ ಅಥವಾ ೨—೩೦ ಗಂಟೆಯ ಸಮಯದಲ್ಲಿ ತೋಟದಲ್ಲಿ ಕೆಲಸ ಮಾಡುತ್ತಿದ್ದ ಶ್ರೀ ಚನ್ನಬಸಪ್ಪ ಎಂಬಾತನನ್ನು ಕೆಲವರು ಸರ್ವೇ ತೋಪಿಗೆ ಕರೆದುಕೊಂಡು ಬಂದು ಆತನಿಗೆ ಇಲ್ಲದ ಚಿತ್ರಹಿಂಸೆ ಮಾಡಿ ಚೂರು ಚೂರಾಗಿ ಕತ್ತರಿಸಿದ್ದಾರೆ. ಆಂದು ಆತ ಸ್ಥಳದಲ್ಲಿಯೇ ಸತ್ತು ಹೋದ. ಯಾವ ಕಾರಣದಿಂದ ಇದು ಆಗಿದೆ ಎಂದರೆ, ಜನವರಿ ೧೪ ರಂದು ಆ ಗ್ರಾಮದಲ್ಲಿ ಏನು ಒಂದು ದುರ್ಘಟನೆ ನಡೆಯಿತು, ಆದಕ್ಕೆ ಸಂಭಂಧಪಟ್ಟ ಎರಡು ಗುಂಪಿನ ಜನರೂ ಆ ಗ್ರಾಮದಲ್ಲಿಯೇ ಇದ್ದರು. ಆ ಒಂದು ಘಟನೆ ನಡೆದ ಮೇಲೆ ಸ್ಥಳೀಯ ಪೋಲೀಸಿನವರು ಸ್ವಲ್ಪ ಜಾಗರೂಕರಾಗಿದ್ದರೆ ಹುತ್ತೊಂದು ಜೀವವನ್ನು ಅವರು ಉಳಿಸಬಹುದಾಗಿತ್ತು, ಇಂತಹ ಗಲಾಟೆ ನಡೆಯಬಹುದೆಂದು ಅವರಿಗೆ ಗೊತ್ತಿದ್ದರೂ ಸಹ ಯಾವ ಕಾರಣದಿಂದಲೋ ಏನೋ ಅವರು ಸರಿಯಾದ ಕ್ರಮ ಕೈಕೊಳ್ಳಲಿಲ್ಲ. ಈ ಕೃತ್ಯ ನಡೆದ ದಿವಸ ಅಲ್ಲಿ ೨ ಪೋಲೀಸ್ ಕಾನ್ಸ್‌ಟೇಬಲ್ಸ್‌ಗಳಿದ್ದರೆಂದು ನನಗೆ ತಿಳಿದುಬಂದಿದೆ. ಆದರೂ ಯಾವ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳಲಿಲ್ಲ. ಈ ಕೃತ್ಯ ನಡೆಸಿದವರು ಟ್ರಾಕ್ಟರ್‌ನಲ್ಲಿ ಬೇರೆ ಕಡೆಗೆ ಹೋಗಿ ತಲೆ ಮರೆಸಿಕೊಂಡಿದ್ದಾರೆ. ಈ ಬಗ್ಗೆ ಸ್ಥಳೀಯ ಪೋಲೀಸಿನವರು ಸರಿಯಾದಂಥ ತನಿಖೆ ಮಾಡಲಿಲ್ಲ, ಕೊಲೆ ಮಾಡಿದವರನ್ನು ಇಲ್ಲಿಯವರೆಗೆ ಅರೆಸ್ಟ ಮಾಡಿಲ್ಲ, ಇದನ್ನು ಸಿ.ಒ.ಡಿ. ಗೆ ರೆಫರ್ ಮಾಡಿದ್ದೇವೆಂದು ಹೇಳುತ್ತಿದ್ದಾರೆ.

ಅಧ್ಯಕ್ಷರು,—ತಾವು ಭಾಷಣ ಮಾಡುವುದು ಬೇಡ, ಪ್ರಶ್ನೆ ಕೇಳಿ ;

10-00 A. M.

ಶ್ರೀ ಸಿ. ಬೈರೇಗೌಡ.—ಪೋಲೀಸಿನವರು ಸರಿಯಾದ ಕ್ರಮವನ್ನು ತೆಗೆದುಕೊಂಡಿದ್ದರೆ ಈ ಒಂದು ಕೊಲೆ ನಡೆಯುತ್ತಾ ಇರಲಿಲ್ಲ. ಕೊಲೆ ನಡೆದ ಮೇಲೆ ಸ್ಥಳೀಯ ಪೋಲೀಸ್ ಅಧಿಕಾರಿಗಳು ಕ್ರಮ ತೆಗೆದು ಕೊಂಡಿಲ್ಲ. ಈ ಕಾರಣಗಳಿಂದ ಈ ಬಗ್ಗೆ ಸರಿಯಾದ ವಿಚಾರಣೆ ಆಗಲೇ ಬೇಕಾಗಿದೆ. ಈ ಒಂದು ಗ್ರಾಮದಲ್ಲಿ ಒಂದೆರೆಡು ತಿಂಗಳಲ್ಲಿ ಎರಡು ಕೊಲೆ ನಡೆಯಿತು ಎಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ಉಳಿಯಂವುದು ಹೇಗೆ ? ಎಲ್ಲರ ಜೀವಕ್ಕೂ ಕುತ್ತು ಇದೆ. ನಿರಾಪರಾಧಿಗಳನ್ನು ಕೊಲೆ ಮಾಡುವಂತಹ ಪರಿಸ್ಥಿತಿ ಇದೆ. ಪೋಲೀಸಿನವರು ಸಾರ್ವಜನಿಕರ ಬೇ ಜವಾಬ್ದಾರಿಯಿಂದ ಈ ಕೊಲೆ ನಡೆದಿದೆ ಆದ್ದರಿಂದ ಈ ಬಗ್ಗೆ ಸರಿಯಾದ ವಿಚಾರಣೆಯಾಗಬೇಕು. ತಪ್ಪಿತಸ್ಥರ ಮೇಲೆ ಉಗ್ರಕ್ರಮತೆಗೆದುಕೊಳ್ಳಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

† ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ) —ಮಾನ್ಯ ಅಧ್ಯಕ್ಷಣಿಯವರೇ ೧೪—೧—೧೯೭೫ ರಂದು ನಡೆದಂತಹ ಕೊಲೆ ಬಗ್ಗೆ ನಾನು ಈ ಸಭೆಯಲ್ಲಿ ಈಗಾಗಲೇ ಚರ್ಚೆ ಮಾಡಿದ್ದೇವೆ. ಆದೆಲ್ಲಾ ವಿವರಣೆಯನ್ನು ಕೊಡಬೇಕಾದ ಅವಶ್ಯಕತೆ ಇಲ್ಲ. ಆ ಬಗ್ಗೆ ಈ ಸಭೆಯಲ್ಲಿ ಹೀಟೆಡ್ ಡಿಸ್ಕಷನ್ ಕೂಡ ಆಯಿತು. ಆಗ ಸರ್ಕಾರದ ಪರವಾಗಿ ಶ್ರೀಮಾನ್ ಚನ್ನಬಸಪ್ಪನವರು ಉತ್ತರ ಹೇಳುತ್ತಾ ಅದನ್ನು ವಿಚಾರಣೆ ಮಾಡಲು ಎಸ್ ಪಿ. ಅವರನ್ನು ನೇಮಕ ಮಾಡುತ್ತೇವೆ ಎಂದು ಹೇಳಿದ್ದಾರೆ. ವಿರೋಧಪಕ್ಷದ ವತಿಯಿಂದ ಜುಡಿಷಿಯಲ್ ಪ್ರೋಬ್ ಮಾಡಿ ಒಂದು ಹೈಪವರ್ ಕಮಿಟಿ ಮಾಡಿ ಟಾಪ್ ಆಫಿಸರ್ಸ್ ಹಾಕಿ ಎಂದು ಹೇಳಲಿಲ್ಲ. ಸಬ್ ಇನ್‌ಸ್ಪೆಕ್ಟರನ್ನು ಅಥವಾ ಇನ್‌ಸ್ಪೆಕ್ಟರನ್ನು ನೇಮಕ ಮಾಡುವುದು ಬೇಡ ಅವರು ಅದನ್ನು ಪರಿಶೀಲನೆ ಮಾಡುವುದು ಕಷ್ಟವಾಗುತ್ತದೆ. ಆದ್ದರಿಂದ ಅದನ್ನು ಪರಿಶೀಲನೆ ಮಾಡಿ ಎಂದು ಹೇಳಿದ್ದೇವೆ. ಯಾವಾಗ ಸರ್ಕಾರದವರು ಬೆಂಗಳೂರು ಎಸ್.ಪಿ. ಅವರಿಗೆ ಅದನ್ನು ಎನ್‌ಕ್ವೈರಿ ಮಾಡಲು ಡೈರೆಕ್ಷನ್ ಕೊಡಲಾಯಿತು ? ಆ ರೀತಿ ಹೇಳಿದ ಮೇಲೆ ಎಷ್ಟು ದೂರ ಈ ಒಂದು ವಿಚಾರಣೆ ಮುಂದುವರಿದಿದೆಯೋ ಗೊತ್ತಿಲ್ಲ. ಏತನ್ಮಧ್ಯೆ ನನ್ನ ಮಿತ್ರರಾದ ಶ್ರೀಮಾನ್ ಬೈರೇಗೌಡರು ಹೇಳಿದ ಹಾಗೆ ೮—೪—೧೯೭೫ ರಂದು ಹಿಂದಿನ ಪ್ರಕರಣಕ್ಕೆ ಸಂಬಂಧ ಒಬ್ಬ ಅಪರಾಧಿಯನ್ನು ಕೊಲೆ ಮಾಡಿದ್ದಾರೆ ಆ ಕೊಲೆಯನ್ನು ಯಾರೇ ಮಾಡಿರಲಿ. ಅದು ಮುಖ್ಯವಲ್ಲ ಈ ಒಂದು ಕೊಲೆಯ ಪ್ರಕರಣಕ್ಕೆ ಸಂಬಂಧಪಟ್ಟಹಾಗೆ ನಾವು ವಿರೋಧ ಪಕ್ಷದ ವತಿಯಿಂದ ಅವರಿಗೆ ರಕ್ಷಣೆ ಕೊಡಿ, ಇವರಿಗೆ ರಕ್ಷಣೆ ಕೊಡಿ ಎಂದು ಇತ್ಯಾದಿಯಾಗಿ ಯಾರೂ ಹೋಹಾಗೆ ಕಾಣಲಿಲ್ಲ. ನಾವು ಗುರುತರವಾದ ಆಪಾದನೆಯನ್ನು ಈ ಬಗ್ಗೆ ಮಾಡಿದ್ದೇವೆ. ಸರ್ಕಾರ ಈ ಬಗ್ಗೆ ಸರಿಯಾದ ಕ್ರಮವನ್ನು ತೆಗೆದುಕೊಳ್ಳಲಿಲ್ಲ ಎಂದು ಹೇಳಿದಾಗ ಶ್ರೀಮಾನ್ ಚನ್ನಬಸಪ್ಪನವರು ಈ ಬಗ್ಗೆ ಬಿಗಿಯಾದ ಕ್ರಮತೆಗೆದುಕೊಳ್ಳುತ್ತೇವೆ ಇದನ್ನು ವಿಚಾರಣೆ ಮಾಡಲು ನೇರವಾಗಿ ಎಸ್.ಪಿ ಗೆ ಎಂಟರೆಸ್ಟ್ ಮಾಡುತ್ತೇವೆ ವಿಚಾರಣೆ ಮಾಡುತ್ತೇವೆಹೇಳಿದ್ದಾರೆ ಆದ್ದರಿಂದ ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ವಿವರವಾದ ವಿವರಣೆಯನ್ನು ಕೊಡಬೇಕು. ಈ ಒಂದು ಪ್ರಕರಣದಲ್ಲಿ ಐ.ಪಿ.ಸಿ ೩೨೪ ನೇ ಸೆಕ್ಷನ್ ಪ್ರಕಾರ ಕೇಸನ್ನು ರಿಜಿಸ್ಟರ್ ಮಾಡಿಕೊಂಡು ಆದ ಮೇಲೆ ಹರಿಜ್ಜಪ್ಪ ಎನ್ನುವನು ಸತ್ತು ಹೋಗಿದ್ದಾನೆ. ೩೦೨ ಪ್ರಕಾರ ಕೇಸನ್ನು ಕನ್‌ವರ್ಟ್ ಮಾಡುತ್ತಾರೆ. ಈ ಕೇಸಿಗೆ ಸಂಬಂಧಪಟ್ಟ ಅಪರಾಧಿಗಳು ೧೦ ಜನ ಯಾರು ಯಾರು ಇದ್ದಾರೆ. ಅವರನ್ನು ಅರೆಸ್ಟ್ ಮಾಡಿಲ್ಲ. ಅವರನ್ನು ಬೇಲ್ ಮೇಲೆ ಬಿಡುಗಡೆ ಮಾಡಿದ್ದಾರೆ ಈ ಮಧ್ಯೆ ಶ್ರೀಮಾನ್ ಚಿಕ್ಕೇಗೌಡರು ಆ ದಿವಸ ಮಧ್ಯೆ ಪ್ರವೇಶ ಮಾಡಿ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಡಿಸ್ಟ್ರಿಕ್ಟ್ ಕೋರ್ಟ್ ಮತ್ತು ಕೆಳಗಿನ ಕೋರ್ಟಿನಲ್ಲಿ ಬೈಲನ್ನು ಕ್ಯಾನ್ಸಲ್ ಮಾಡುವ ಕಾಲದಲ್ಲಿ ಕೆಲವು ಅಭಿಪ್ರಾಯಗಳನ್ನು ಹೇಳಿದ್ದಾರೆ ಪೋಲೀಸ್ ಅಧಿಕಾರಿಗಳು ಬೈಲ್ ಕ್ಯಾನ್ಸಲ್ ಮಾಡುವ ಕಾಲದಲ್ಲಿ ಐವಿಟ್‌ನೆಸ್ ರೆಕಾರ್ಡ್ ಮಾಡಲಿಲ್ಲ. ಅಫಿಡವಿಟ್ ಕೂಡ ಹಾಕಲಿಲ್ಲ. ಈ ಆಪರಾಧಿಗಳನ್ನು ಅರೆಸ್ಟ್ ಮಾಡಿ ಸರಿಯಾಗಿ ವಿಚಾರಣೆ ನಡೆಸಿ ಅದರ ಮಾಹಿತಿಯನ್ನು ಕೋರ್ಟಿನ ಮುಂದೆ ಇಟ್ಟು ಕೋರ್ಟನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತಕ್ಕಂಥಾ ಒಂದು ಸರಿಯಾದ ಪ್ರಯತ್ನವನ್ನು ಮಾಡಿಲ್ಲ. ಈ ಆಪಾದನೆ ಕೂಡ ಇದೆ. ಸರ್ಕಾರದ ವತಿಯಿಂದ ಪಬ್ಲಿಕ್ ಪ್ರಾಸಿಕ್ಯೂಟರ್ ಏನಿದ್ದಾರೆ ಅವರೂ ಕೂಡ ಸರಿಯಾಗಿ ತಮ್ಮ ಕರ್ತವ್ಯವನ್ನು ನಿರ್ವಹಣೆ ಮಾಡಿಲ್ಲ ಈ ಎಲ್ಲಾ ಕಾರಣಗಳಿಂದಲೂ ಕೂಡ ಏನಾಗಿದೆ ಎಂದರೆ ಕೊಲೆ ನಡೆದಂತಹ ಸಂದರ್ಭದಲ್ಲಿ ಅಪರಾಧಿಗಳ ಮೇಲೆ ಬಿಗಿಯಾದ ಕ್ರಮವನ್ನು ತೆಗೆದುಕೊಂಡಿಲ್ಲ. ಇದರಿಂದ ಹೊರಗಡೆ ಇರತಕ್ಕ ಜನಗಳಿಗೆ ಏನೂ ಮಾಡಿದರೂ ಪರವಾಯಿಲ್ಲ ಎನ್ನುವ ಒಂದು ಭಾವನೆ ಬಂದಿದೆ ಗ್ರಾಮಾಂತರ ಪ್ರದೇಶದ ಜೀವನ ಎಷ್ಟರಮಟ್ಟಿಗೆ ಇದೆಯೆಂಬುದು ಮಾನ್ಯ ಮುಖ್ಯಮಂತ್ರಿಗಳಿಗೆ ಅನುಭವ ಇದೆ. ಕೊಲೆ ಮಾಡಿದವರು ಮೀಸೆ ಮೇಲೆ ನಿಂಬೆಹಣ್ಣು ಇಟ್ಟುಕೊಂಡು ತಿರುಗಾಡುತ್ತಾನೆ. ಅಪರಾಧಿಗಳ ಮೇಲೆ ಏನೂ ಕ್ರಮ ತೆಗೆದುಕೊಳ್ಳದಿದ್ದರೆ ಸರ್ಕಾರ ನಮ್ಮ ಪರವಾಗಿದೆ ಎನ್ನುವ ಭಾವನೆ ಬರುತ್ತದೆ. ಇಂಥಾ ಒಂದು ವಾತಾವರಣ ಬೆಳೆಯುವುದಕ್ಕೆ ಪೋಲೀಸ್ ಅಧಿಕಾರಿಗಳು ಅವಕಾಶ ಮಾಡಿಕೊಟ್ಟಿದ್ದಾರೆ ಎಂದು ಹೇಳಬೇಕಾಗಿದೆ. ಶ್ರೀಮಾನ್ ತಿಮ್ಮಪ್ಪನವರು ಪದೇ ಪದೇ ಐ.ಪಿ.ಸಿ. ೩೦೨ರ ಪ್ರಕಾರ ಕೇಸು ರಿಜಿಸ್ಟರ್ ಮಾಡಿ ಅವರನ್ನು ಅರೆಸ್ಟ್ ಮಾಡತಕ್ಕದ್ದು ಪ್ರೈಮರಿ ರೆಸ್‌ಪಾನ್ಸಿಬಿಲಿಟಿ ಆಫ್ ದಿ ಪೋಲೀಸ್ ಆಫೀಸರ್ ಎಂದು ಸಾರಿ ಸಾರಿ ಹೇಳಿದ್ದಾರೆ. ಆದರೂ ಸಹ ಸರ್ಕಾರದವರು ಈ ಬಗ್ಗೆ ಸರಿಯಾದ ಕ್ರಮವನ್ನು ತೆಗೆದುಕೊಳ್ಳಲಿಲ್ಲ ಎಂದು ನನ್ನ ಆಪಾದನೆ. ಈ ಕಾರಣದಿಂದ ಇವೊತ್ತು ಎರೆಡು ಕೊಲೆಗಳು ಆಗಿವೆಎಂದು ನಾವು ಸಕಾರಣವಾಗಿ ನಿರ್ಣಯ ಮಾಡುತ್ತೇವೆ ಸರ್ಕಾರದವರು ಶೀಘ್ರವಾಗಿ ಕ್ರಮತೆಗೆದುಕೊಂಡು ಪೋಲೀಸ್ ಅಧಿಕಾರಿಗಳು ಇದರ ವಿಚಾರಣೆ ಸಂಬಂಧದಲ್ಲಿ ಕರ್ತವ್ಯ ಲೋಪ ಮಾಡಿದ್ದಾರೆ. ಪಬ್ಲಿಕ್ ಪ್ರಾಸಿಕ್ಯೂಟರ್ ಕೂಡ ಸರಿಯಾದ ಒಂದು ಮಾರ್ಗದರ್ಶನ ಮಾಡಿಲ್ಲ ಎಂದು ನನ್ನ ಆಪಾದನೆ. ಸರ್ಕಾರ ಈ ರೀತಿ ಕೊಲೆ ಮೊಕದ್ದಮೆ ವಿಷಯದಲ್ಲಿ ಕರ್ತವ್ಯ ನಿರ್ವಹಣೆಯನ್ನು ಮಾಡಿ ಒಂದು ಬಿಗಿಯಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡದೆ ಹೋದರೆ ಗ್ರಾಮಾಂತರ ಪ್ರದೇಶದಲ್ಲಿ ಒಂದು ಸರಿಯಾದ ವಾತಾವರಣವನ್ನು ತರತಕ್ಕಂಥಾದ್ದು ಕಷ್ಟವಾಗುತ್ತದೆ.

ಇದರಿಂದ ಮತ್ತೆ ಕೊಲೆಗಳು ನಡೆಯುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಈ ಕೇಸಿಗೆ ಸಂಬಂಧಪಟ್ಟ ಹಾಗೆ ಯಾರು ಯಾರು ಕರ್ತವ್ಯ ಲೋಪ ಮಾಡಿದ್ದಾರೆ, ಯಾರು ಇದಕ್ಕೆ ಆಕ್ಯೂಸ್ಡ್ ಪರ್ಸನ್ಸ್ ಇದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಮತ್ತು ಈ ಕೇಸಿನ ಸಂಬಂಧದಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರ್ ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಣೆ ಮಾಡಿಲ್ಲ. ಆದ್ದರಿಂದ ಇವರುಮೇಲೆ ಸರ್ಕಾರದವರು ಕ್ರಮ ತೆಗೆದುಕೊಳ್ಳಬೇಕು. ಇದನ್ನು ವಿಚಾರಣೆ ಮಾಡುವ ಬಗ್ಗೆ ಎಸ್ ಪಿ. ಅವರನ್ನು ಏನು ನೇಮಕ ಮಾಡಿದ್ದರು ಅವರು ಈ ವಿಚಾರದಲ್ಲಿ ಎಷ್ಟೂ ದೂರ ಬಂದಿದ್ದಾರೆ ಎಂಬುದನ್ನು ತಿಳಿಸಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ

ಶ್ರೀ ಕಾಗೋಡು ತಿಮ್ಮಪ್ಪ.— ೪—೫—೧೯೭೫ ರಂದು ಕೊಲೆ ಆದ ಮನುಷ್ಯ ಏನಿದ್ದಾನೆ ಅವನು ಹಿಂದಿನ ಕೊಲೆಯ ಅಪರಾಧಿ. ಈ ಕೇಸಿನ ಸಂಬಂಧದಲ್ಲಿ ಕೇಸು ಅಪರಾಧಿಗಳ ಬಗ್ಗೆ ಎಫ್.ಐ.ಆರ್. ಅನ್ನು ತರಿಸಿದ್ದೀರಾ ? ಐ ವಿಟ್‌ನೆಸ್‌ನಲ್ಲಿ ಅವನಿಗೆ ಸಂಬಂಧ ಇದೆಯೇ ? ಈಗ ಹಿಂದಿನ ಕೊಲೆಯಿಂದ ಈ ಒಂದು ಕೊಲೆ ನಡೆದಿದೆ. ಇದರಿಂದ ಮತ್ತೊಂದು ಕೊಲೆ ಆಗಬಹುದು. ಆದ್ದರಿಂದ ಇದಕ್ಕೆ ಕಾರಣಕರ್ತರಾದವರನ್ನು ಕಂಡುಹಿಡಿದು ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಮತ್ತೊಂದು ಕೊಲೆ ಆಗಬಹುದು. ಈ ಕೇಸಿನ ಸಂಬಂಧದಲ್ಲಿ ಸಾಕ್ಷಿ ಹೇಳಿದವರ ಕೊಲೆ ಆಗಬಹುದು, ಅಪರಾಧಿಗಳ ಕೊಲೆ ಆಗಬಹುದು. ಏತಕ್ಕೆಂದರೆ ಕೊಲೆ ಮೇಲೆ ಕೊಲೆ ಆಗುತ್ತಿದೆ. ಇದಕ್ಕೆ ವಿಶೇಷವಾಗಿ ಅಲ್ಲಿಯ ವಾತಾವರಣ ಇರಬೇಕು. ಇಂಥಾ ಒಂದು ಪರಿಸ್ಥಿತಿಯನ್ನು ನೋಡಿದರೆ ಹಿಂದೆ ನಡೆದಂತಹ ಕೊಲೆಯಂ ಬಗ್ಗೆ ತನಿಖೆ ಮಾಡಿ ಚಾರ್ಜ್‌ಷೀಟ್ ಹಾಕಿದ್ದಾರೆ ಬಹುಷಃ ಇನ್ನೊಂದು ಕೊಲೆ ಆಗುತ್ತಾ ಇರಲಿಲ್ಲ. ಆದ್ದರಿಂದ ಇದನ್ನು ತನಿಖೆ ಮಾಡುವುದರ ಜೊತೆಗೆ ಇದಕ್ಕೆ ವಿಶೇಷವಾದ ಕಾರಣಗಳು ಏನಿವೆ, ಸನ್ನಿವೇಶಗಳು ಏನಿವೆ ಅದಕ್ಕೆ ತಕ್ಕ ಬಂದೋಬಸ್ತು ಮಾಡುವುದು ಸೂಕ್ತವಾಗಿದೆ. ಇಲ್ಲದೆ ಹೋದರೆ ನಿರಪರಾಧಿಗಳು ಪ್ರಾಣವನ್ನು ಕಳೆದುಕೊಳ್ಳತಕ್ಕ ಪರಿಸ್ಥಿತಿ ಬರಬಹುದು. ಆದ್ದರಿಂದ ಈ ಬಗ್ಗೆ ಸರ್ಕಾರದವರು ಮುಂಜಾಗರೂಕತಾ ಕ್ರಮವನ್ನು ಕೈಗೊಳ್ಳಬೇಕು ಎಂದು ನಾನು ಹೇಳುತ್ತೇನೆ.

† ಶ್ರೀ ಡಿ. ದೇವರಾಜ್ ಅರಸ್ (ಮಂಡ್ಯಿ ಮಂತ್ರಿಗಳು).—ಆಧ್ಯಕ್ಷಣೆಯವರೇ, ಮಾನ್ಯ ಶ್ರೀ ದೇವೇಗೌಡರು ಹಿಂದೆ ನಡೆದಂಥ ಕೊಲೆಗೆ ಸಂಬಂಧಪಟ್ಟ ಹಾಗೆ ಚರ್ಚೆ ಮಾಡಿದ್ದಾರೆ. ಅದು ಈಗ ನಮ್ಮ ಮುಂದೆ ಇಲ್ಲ. ಆದರೆ ಅದಕ್ಕೂ ಇದಕ್ಕೂ ಸಂಬಂಧವಿದೆಯೆಂದು ಅವರ ಅಭಿಪ್ರಾಯವಾಗಿದೆ. ನಮ್ಮ ಮುಂದೆ ಅವರು ಕಳುಹಿಸಿರತಕ್ಕ ನೋಟೀಸ್ ಹಿನ್ನೆಲೆ ಏನಿ ಪ್ರಕಾರ ಇದೆ ಮಾನ್ಯ ಶ್ರೀ ಬೈರೇಗೌಡರು ಕೋಡಿಹಳ್ಳಿ ಗ್ರಾಮ, ಹೊಸಕೋಟೆ ತಾಲ್ಲೂಕ ನಲ್ಲಿ ನಡೆದಂಥ ಮರ್ಡರ್ ಬಗ್ಗೆ ನೋಟೀಸ್ ಕಳುಹಿಸಿದ್ದಾರೆ ಹಿಂದು ವಿಚಾರವನ್ನು ನಿಜವಾಗಿ ಹೇಳಿದ್ದಾರೆ. ಆ ಸಂದರ್ಭದಲ್ಲಿ ನಾನು ಇಲ್ಲಿ ಇರಲಿಲ್ಲ ಮಾನ್ಯ ಶ್ರೀ ಚನ್ನಬಸಪ್ಪನವರು ಇದರ ಬಗ್ಗೆ ಮಾತನಾಡುತ್ತಾ ಎಸ್. ಪಿ. ಇನ್‌ವೆಸ್ಟಿಗೇಷನ್ ನಡೆಸಬೇಕೆಂದು ಹೇಳಿದ್ದಾರೆ. ಚಾರ್ಜ್‌ಷೀಟ್ ಇಂದು ಅಥವಾ ನಾಳೆ ಹಿಂದಿನ ಕೇಸಿನಲ್ಲಿ ಹಾಕುವವರಿದ್ದಾರೆ. ವಿಳಂಬ ಏಕೆ ಆಯಿತೆಂದರೆ ಯಾವಾಗ ಬೇರೆಯವರಿಂದ ವಿಚಾರಣೆ ಮಾಡಿಸುತ್ತೇನೆಂದು ಹೇಳಿದಮೇಲೆ ಮತ್ತೆ ಪುನರ್ವಿಚಾರಣೆ ಮಾಡಬೇಕಾದರೆ ಸಾಮಾನ್ಯವಾಗಿ ವಿಳಂಬ ಆಗುತ್ತದೆ ಈ ಮಧ್ಯೆ ಎಸ್. ಪಿ. ಅವರು ಖಾಯಿಲೆ ಬಿದ್ದು ಇನ್‌ಚಾರ್ಜ್ ಎಸ್. ಪಿ. ಹೋಗಿ ಚಾರ್ಜ್‌ಷೀಟ್ ಹಾಕಬೇಕಾಯಿತು. ಆದ್ದರಿಂದ ವಿಳಂಬ ಆಗಿದ್ದು ನಿಜ. ಅದಕ್ಕೋಸ್ಕರ ನಾವೂ ಕೂಡ ಇಂತಹ ಸಮಯ ಸಂದರ್ಭದಲ್ಲಿ ಎಸ್. ಪಿ. ಗೆ ವಿಚಾರಣೆ ಮಾಡುತ್ತೇವೆಂದು ಹೇಳಿದಾಗ, ಒಂದೊಂದು ವೇಳೆ ಅದನ್ನು ಬೇಗ ಮಾಡುವುದಕ್ಕಾಗುತ್ತದೆ, ಒಂದೊಂದು ವೇಳೆ ನಿಧಾನವಾಗಿ ಮಾಡಬೇಕಾಗುತ್ತದೆ. ಆದ್ದರಿಂದ ಉದ್ದೇಶಪೂರ್ವಕವಾಗಿ ಅದನ್ನು ನಿಧಾನ ಮಾಡಬೇಕೆಂಬ ಉದ್ದೇಶ ಸರ್ಕಾರದ ಅಧಿಕಾರಿಳಿಗೆ ಇತ್ತು ಎಂದು ಹೇಳಿದ್ದು ಸರಿಯಲ್ಲ. ಮತ್ತೆ ಮಾನ್ಯ ಶ್ರೀ ದೇವೇಗೌಡರು ಅದರ ಬಗ್ಗೆ ಅನುಮಾನಪಡುವುದರಲ್ಲಿ ಏನೂ ಅರ್ಥವಿಲ್ಲ. ಅದಲ್ಲದೆ ಪ್ರಾಸಿಕ್ಯೂಟರ್ ಹೀಗೆ ಮಾಡಿದ್ದಾರೆ, ಹಾಗೆ ಮಾಡಿದ್ದಾರೆ ಅವರು ಅಫಿಡವಿಟ್ ಹಾಕಿಲ್ಲವೆಂದು ಹೇಳಿರುವುದನ್ನು ನಾನು ವಿಚಾರಮಾಡಿ ತಿಳಿಯಬೇಕು. ಅವರು ಹೇಳಿದ ಹಾಗೆ ಎರಡೂ ಕೋರ್ಟ್‌ಗಳಲ್ಲಿ ಸರ್ಕಾರದ ವತಿಯಿಂದ ಬೆಯಿಲ್ ಮೇಲೆ ಬಿಡಬಾರದು, ಅವಕಾಶ ಕೊಡಿ ಎಂದು ಕೇಳಿದ್ದು ನಿಜ, ಕಾನೂನು ಪ್ರಕಾರ ಅರೆಸ್ಟ್ ಮಾಡಬೇಕೋ ಬಿಡಬೇಕೋ ಅದನ್ನು ಸರ್ಕಾರದವರು ಮಾಡುತ್ತಾರೆ. ಕೋಡಿಹಳ್ಳಿ ಗ್ರಾಮದಲ್ಲಿ ಆದಂಥ ಕೊಲೆಗೆ ಸಂಬಂಧಪಟ್ಟ ವಿಚಾರದಲ್ಲಿ ನಾನು ಈಗ ಒಂದು ಸ್ಟೇಟ್‌ಮೆಂಟನ್ನು ಈ ಸಭೆಯಲ್ಲಿ ಮಾಡುತ್ತೇನೆ. ಅದು ಈ ರೀತಿ ಇದೆ :

On 8th April 1975 at about 5 P.M on receipt of information regarding some trouble in Kodiballi village, the Sub-Inspector of Police, Kadugodi, rushed to the village with his staff. He also received a complaint from Sri B. Nanjundaiah., ex-patil,

Kodihalli to the effect that at about 4 P.M. the same day, Sonnappa, V. P. Chairman of Kodihalli and five others armed with deadly weapons assaulted T. Channabasappa, while he was returning from his fields and as a result, Channabasappa died. The dead body of Channabasappa was found in a cart near the school in the village.

A case in Kadugodi Police Station crime No. 65/75 under Section 147,148, 302 read with 34 I.P.C. was registered and investigation taken up immediately. The Sub-Inspector of Police, Hoskote, and incharge Circle Inspector of Police, also reached the spot. The incharge Superintendent of Police, Bangalore District, also rushed to the spot. Deputy Commissioner and the Assistant Commissioner also visited the village the same day. Armed party consisting of one Head Constable and ten Police Constables is stationed in the village since that night.

A thorough search was made for the accused persons but they were not available and were absconding. On 9th April 1975, the inquest was held and the body was sent for post-mortem examination. The houses of the accused persons were searched and weapons used by them for the offence kept concealed under the hay-stack near the houses of the accused persons were seized. Efforts are being continued to trace the accused persons who are alleged to have escaped in a tractor belonging to Sonnappa, immediately after the offence.

All the six accused persons are said to belong to Congress (O). The deceased Channabasappa is the uncle of accused Sonnappa, and is said to be the Leader of Congress (R) in the village. Previously the deceased was also in Congress (O) and due to this there was enmity between the deceased and the accused. On 14th January 1975 there was a case of rioting and murder in the same village in which the deceased along with nine others are alleged to have assaulted one Basavegowda (Lingayat) and Hutchappa, a Harijan of Kodihalli village resulting in the death of Hutchappa in the Hospital on 18th January 1975. A case in Cr. No. 13/75 under Sections 143, 147, 148, 149 read with 324 and 302 I.P.C. of Kadugodi, registered against the deceased in the case and nine others is still pending investigation.

Investigation disclosed that the accused persons were hiding in the Casuarina grove near the scene of occurrence and while the deceased was returning after watering his sugercane plantation, assaulted him and caused as many as 17 injuries on his person as a result of which he died.

Investigation of the case in Crime No. 65,75 has since been taken over by an officer of the rank of the Superintendent of Police of COD (10-4-1975,. He is making vigorous efforts to apprehend the absconding accused. One of the accused persons by name Thammanna father of Accused No. 1 T. Sonnappa has been arrested by him on 11th April 1975. He has further ascertained that one Begoor Narayanaswamd S/o Patel Munegowda has played an active part in helping the accusey

to escape by providing them with a tractor. So he has been apprehended on 15th April 1975 as an abettor of the crime. The Superintendent of Police has also ascertained that a driver from Tumkur was temporarlily employed to drive the tractor in which theaccused persons escaped from the scene of crime and is making efforts to trace this driver. So, the total number of accused persons comes to eight, for the present. Two have been arrested so far. Efforts are continued to apprehend the remaining accused.

† ಶ್ರೀ ಎಚ್. ಡಿ. ದೇವೇಗೌಡ.—ಅಧ್ಯಕ್ಷಣಿಯವರೇ, ಈ ಕೇಸ್ ಬಗ್ಗೆ ಸರ್ಕಾರ ಏನೇನು ಕ್ರಮಗಳನ್ನು ತೆಗೆದುಕೊಂಡಿದ್ದಾರೆಂಬುದನ್ನು ತಿಳಿಸಿದರು. ೮-೪-೧೯೭೫ರಲ್ಲಿ ನಡೆದಂಥ ಒಂದು ಕೊಲೆಯ ಪ್ರಕರಣದಲ್ಲಿ ಇವತ್ತು ಈಗಾಗಲೇ ಸಿ ಓ.ಡಿ ಅಧಿಕಾರಿಗಳನ್ನು ನೇಮಕ ಮಾಡಿದ್ದಾರೆಂದು ಹೇಳಿದ್ದಾರೆ. ಆದರ ಬಗ್ಗೆ ನಾನು ಪ್ರಶ್ನೆ ಮಾಡುವುದಿಲ್ಲ. ಸರ್ಕಾರ ತನಿಖೆಯಲ್ಲಿ ಯಾವ ರೀತಿ ಅಪರಾಧಿಗಳನ್ನು ಪತ್ತೆ ಹಚ್ಚಬೇಕೆಂಬುದರಲ್ಲಿ ಒಂದು ನಿರ್ಣಯ ತೆಗೆದುಕೊಳ್ಳುವುದು ಸರ್ಕಾರಕ್ಕೆ ಬಿಟ್ಟಿರುವ ವಿಷಯ. ಆದರೆ ೮-೪-೧೯೭೫ರಲ್ಲಿ ನಡೆದಂಥ ಕೊಲೆ ಮೊಕದ್ದಮೆಗೆ ಪೋಲೀಸ್ ಇಲಾಖೆಯವರು ತೋರಿಸಿರತಕ್ಕ ತೀವ್ರತೆ. ಯಾರು ಅವತ್ತು ಶ್ರೀಮಾನ್ ಚನ್ನಬಸಪ್ಪನವರು ಎಂದು ಹೇಳಿದರಲ್ಲಾ ಅವರ ಕಡೆ ೧೦ ಜನ ಕಾಂಗ್ರೆಸ್ (ಆರ್) ಸೇರಿದವರಿದ್ದರು. ಅವರ ಕಡೆ ಕೆಲವು ವಿವರಣೆಗಳನ್ನು ಕೊಟ್ಟು ಹೇಳಿದ್ದಾರೆ. ಇವತ್ತು ಪೋಲೀಸ್ ಇಲಾಖೆಯವರನ್ನು ತೋರಿಸಿದ್ದರೆ ಬಹುಶಃ ಎರಡನೆ ಕೊಲೆ ಆಗುತ್ತಿರಲಿಲ್ಲ. ಇವತ್ತು ಕೆಲವು ಆಕ್ಷೇಪಣೆಗಳನ್ನು ಎತ್ತಿದರು. ನನ್ನ ಮುಂದೆ ಆದಕ್ಕೆ ಸಂಬಂಧಪಟ್ಟ ಫೈಲು ಇಲ್ಲ. ಈ ಸಭೆಯಲ್ಲಿಯೇ ಎರಡು ತಿಂಗಳುಗಳ ಹಿಂದೆ ಸಾಕಷ್ಟು ಚರ್ಚೆ ನಡೆದು ಆದನ್ನು ಎಸ್.ಪಿ. ಗೆ ಯಾವತ್ತು ಆರ್ಡರ್ ಮಾಡಿದರೆಂಬ ಬಗ್ಗೆ ನಾಳೆ ಬೇಕಾವರೆ ಸಭೆಗೆ ತಿಳಿಸಿ ಅವರು ಎಷ್ಟು ದಿವಸಗಳವರೆಗೆ ಕಾಯಿಲೆ ಬಿದ್ದಿದ್ದರು ? ಬೇರೆಯವರಿಗೆ ಏನೆಂದು ಆಥರೈಜ್ ಮಾಡಿದ್ದೀರಿ, ಅವರಂ ವಿಚಾರಣೆ ಮುಗಿಸಿದ್ದು ಎಂದು ? ಯಾವ ಕಾರಣದಿಂದ ಡಿಲೇ ಆಯಿತೆಂಬುದನ್ನು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಎಸ್. ಪಿ. ಅವರು ಕಾಯಿಲೆ ಬಿದ್ದರು. ಈಗ ಅವರ ಚಾರ್ಜನ್ನು ನ್ಚಾರ್ಜ್ ಎಸ್.ಪಿ.ಗೆ ಮಹಿಸಿದ್ದರು. ಅವರು ಚಾರ್ಜ್‌ಷೀಟ್ ಹಾಕುವುದಕ್ಕೆ ತಡವಾಗುತ್ತತೆಂದು ಹೇಳಿದರು. ನಾನು ಆದನ್ನು ಸಂಪೂರ್ಣವಾಗಿ ಒಪ್ಪುತ್ತೇನೆ. ಇದಾದಮೇಲೆ ಸರ್ಕಾರದಿಂದ ಅವರಿಗೇನು ಡೈರೆಕ್ಷನ್ ಕೊಟ್ಟಿರಿ ? ಅವರಿಗೆ ಏನು ನಿರ್ದೇಶನ ಕೊಟ್ಟಿರಿ. ವಿಚಾರಣೆ ಏಂದು ಮುಗಿಯಿತು ? ಅವರ ವಿಚಾರಣೆಯಲ್ಲಿ ಅಪರಾಧಿ ಇಂತಹವರೆಂದು ಪತ್ತೆಯಾಯಿತೇ ? ಕೋರ್ಟಿನವರು ಏನು ಹೇಳಿದಾರೆ, ಅವರಿಗೆ ಸಂಬಂಧಪಟ್ಟವರಿಂದ ಕೇಸ್ ಕನ್‌ವಿನ್ಸ್ ಮಾಡುವುದರಲ್ಲಿ ವಿಫಲರಾಗಿದ್ದಾರೆ. ಆಫಿಡವಿಟ್ ಇಲ್ಲ. ಎರಡು ಕೋರ್ಟ್‌ಗಳ ಜಡ್ಜ್‌ಮೆಂಟ್‌ಗಳನ್ನು ತರಿಸಿ. ನಾವು ಅವರನ್ನು ಹಿಡಿಯುವ ರೀತಿ ನೀತಿ ಪೋಲೀಸ್ ಅಧಿಕಾರಿಗಳಿಗೆ ಮಾರ್ಗದರ್ಶನವಾಗಬೇಕು. ಪಬ್ಲಿಕ್ ಪ್ರಾಸಿಕ್ಯೂಟರ್ ಏನು ಹೇಳಿದ್ದಾರೆ, ಎಸ್ ಪಿ. ಏನು ಹೇಳಿದ್ದಾರೆ ಎಂಬುದನ್ನೆಲ್ಲಾ ನಾಳೆ ಈ ಸಭೆಗೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ

ಶ್ರೀ ಸಿ. ಬೈರೇಗೌಡ.—ಪೋಲೀಸ್ ಡಿಪಾರ್ಟ್‌ಮೆಂಟಿನ ಮೊದಲನೆಯ ಕರ್ತವ್ಯ ಆ ಕೃತ್ಯ ನಡೆದ ಕೂಡಲೇ ಸರಿಯಾದ ಬಂದೋಬಸ್ತ್ ಮಾಡಬೇಕಾಗಿತ್ತು. ಹಾಗೆ ಮಾಡಿದ್ದರೆ ಈಗ ನಡೆದಿರುವ ಕೃತ್ಯ ನಡೆಯಂವುದಕ್ಕೆ ಅವಕಾಶವಿರುತ್ತಿರಲಿಲ್ಲ. ಅವರು ಸರಿಯಾಗಿ ಬಂದೋಬಸ್ತ್ ಮಾಡಿರಲಿಲ್ಲ. ಆಪರು ಏತಕ್ಕೋಸ್ಕರ ಸರಿಯಾದ ಮುಂಜಾಗ್ರತೆ ವಹಿಸಲಿಲ್ಲವೋ ಆದಕ್ಕೆ ಅವರ ಮೇಲೆ ದಯಮಾಡಿ ಕ್ರಮ ತೆಗೆದುಕೊಳ್ಳಬೇಕು.

(ii) *re* : propriety of the Minister of State for Electricity in holding Positions in Several Co-operative Institutions.

ಶ್ರೀ ಎಚ್. ಡಿ. ದೇವೇಗೌಡ.—ನಾನು ರೂಲ್ ೩೧೨ರ ಪ್ರಕಾರ ಒಂದು ನೋಟೀಸ್ ಕಳುಹಿಸಿದ್ದೇನೆ ಶ್ರೀ ಮಾನ್ ಶ್ರೀಕಂಠಯ್ಯನವರು, ವಿದ್ಯುಚ್ಛಕ್ತಿ ಖಾತೆಯ ಸಚಿವರಾಗಿದ್ದಾರೆ. ಅವರು ಮಂತ್ರಿಗಳಾಗಿದ್ದು ಆದರ ಜೊತೆಗೆ ಕೆಲವು ಸಂಘ ಸಂಸ್ಥೆಗಳಲ್ಲಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಹಾಗೂ ಡೈರೆಕ್ಟರ್ ಆಗಿ ಇನ್ನೂ ಮುಂದುವರಿಯುತ್ತಿದ್ದಾರೆ. ಈ ಬಗ್ಗೆ ಈಗಾಗಲೇ ಚರ್ಚೆಯಾಗಿ ಮಾನ್ಯ ಮುಖ್ಯ ಮಂತ್ರಿಗಳು ನಾನು ನಿರ್ದೇಶನ ಕೊಟ್ಟಿದ್ದೇನೆಂದು ಹೇಳಿದ್ದಾರೆ. ಇದೇ ಉತ್ತರವನ್ನು ಮೇಲ್ಮನೆಯಲ್ಲಿಯೂ ಹೇಳಿದ್ದಾರೆ. ಆದು ಹೇಳಿ ಇಲ್ಲಿಗೆ ಸುಮಾರು ೩ ತಿಂಗಳಾದರೂ ಕೂಡ ಮಾನ್ಯ